


ಎಡದಿಂದ ಬಲಕ್ಕೆ:

1. ಅಬ್ಬರ ತೋರಹೋದದ್ದಕ್ಕೆ ಅಡ್ಡಿ ಒದಗಿತ್ತು (4)
3. ಪರಿಭವದಲ್ಲೇ ಅಡಗಿದೆ ಸಂವತ್ಸರ (3)
4. ಸಂವಹನದ ಯಶಸ್ಸಿಗೆ ಹೋಮ ಮಾಡಬೇಕೇ? (3)
6. ಆಚಾರ್ಯರನ್ನು ಅನುಸರಿಸಿಯೇ ಸದಾ ಓಡಾಡುವವ (4)
8. ಹೊಗೆ ಎಬ್ಬಿಸಿ ತನ್ನ ದ್ವೇಷವನ್ನು ತೋರಿದನಲ್ಲ! (4)
10. ಹೆದರಿ ಕಾಲು ಕಿತ್ತವ ಅದರಿಂದಲೇ ದೋಷಿಯಾದ (4)
12. ದಿವ್ಯ ವಾಕ್ಚಾತುರ್ಯ ಪಡೆದಿದ್ದಾನೆ– ಹೆಸರು ಸೂರ್ಯ (4)
16. ಟೊಂಗೆ ಏರುವ ಪ್ರಯತ್ನದಲ್ಲಿದೆ ಗಂಡು ಕುರಿ (3)
17. ಹೆಸರು ರಮಾಮಣಿ. ಅದಕ್ಕೆ ತಕ್ಕಂತೆಯೇ ಸುಂದರಿ (3)
18. ಹುರುಳಿಕಾಳು ರಾಶಿ ಕಾಯಲು ಬಂದ ಗಟ್ಟಿ ಮನುಷ್ಯ (4)

ಮೇಲಿಂದ ಕೆಳಕ್ಕೆ:

1. ಎಲ್ಲರಿಗೂ ಅನಿವಾರ್ಯವೇ ಹೌದು ಈ ಭೂಮಿ (3)
2. ಬಗೆಹರಿಸಲಾಗಲೇ ಇಲ್ಲ, ಎಂಥ ಗುಟ್ಟು! (3)
3. ಪ್ರಥಮದ ಆರಂಭಕ್ಕೆ ಐದನ್ನು ಸೇರಿಸಿ– ನಮ್ಮ ಲೋಕ ನೋಡಿ (3)
5. ಗಡಿಯನ್ನು ಮುಟ್ಟುವವರೆಗೂ ನಿಲ್ಲದು ಹೆಜ್ಜೆ ಪಯಣ (3)
6. ಆ ನಾಯಕ, ಏನೂ ತಿಳಿಯದ ಮುಗ್ಧ ಬಿಡಿ (4)
7. ಸರಸಕ್ಕಾಗಿ ಆತ ತಯಾರಿಸಿದ್ದು, ಸಾರಭರಿತವಾಗಿದೆಯಲ್ಲ! (4)
8. ಹೂದೋಟ ಕೊಳ್ಳುವುದರಲ್ಲಿ ಹಿಡಿದ ಪಟ್ಟು ಬಿಡದವ (4)
9. ದೊರೆತದ್ದನ್ನೆಲ್ಲ ಸಂಗ್ರಹಿಸಲು ತೊರೆಯ ತಟಾಕವೇ ಸರಿ (4)
11. ಕೆಟ್ಟವರಿಗೆ ಸಿಕ್ಕೀತು ಹೇಗೆ 'ಅರಸನ ಟೋಪಿ?' (3)
13. ವರ್ಣಿಸಿದ ದೃಶ್ಯಗಳನ್ನೆಲ್ಲ ತೋರಿದ್ದು ಪಶ್ಚಿಮ ದಿಕ್ಕು (3)
14. ಆರೋಹಣದ ಅನುಭವಗಳನ್ನೆಲ್ಲ ಹೇಳು (3)
15. ಅರಳುವ ಹೂವಿನಂತೆಯೇ ಇದೆ ಸ್ಫಟಿಕ (3)

## 01–5–14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಆಶಯ; 3. ಹಾವೇರಿ; 4. ಶೋಧನ; 6. ಸುನಾದ; 7. ಕರಟಕ; 9. ಮರುದನಿ; 11. ತಿಣುಕಾಟ; 13. ತಲೆಭಾರ; 15. ನೆನಪು; 17. ಕೆಳಗೆ; 18. ಕಾಳಿಂಗ; 19. ತಳಿರು.

ಮೇಲಿಂದ ಕೆಳಕ್ಕೆ:

1. ಆರಿಸು; 2. ಯಶೋದ; 3. ಹಾರಾಟ; 5. ನವಿರು; 7. ಕರಾಮತಿ; 8. ಕಳ್ಳಕೂಟ; 9. ಮಡಿವಂತ; 10. ನಿರಾಧಾರ; 12. ಕಾಣಿಕೆ; 14. ಲೆಕ್ಕಿಗ; 15. ನೆಗೆತ; 16. ಪುಕಾರು.

## ಪ್ರಶ್ನಾಂಕಣ

# ಮಾನವ ಕಲೆ- ಎಷ್ಟು ಪ್ರಾಚೀನ?

ಮೂಲತಃ ಮೃಗಸದೃಶ ಜೀವಿಯಾಗಿಯೇ ಅವತರಿಸಿದ ಮನುಷ್ಯ ಪ್ರಾಣಿಯನ್ನು ನಾಗರಿಕತೆಯ, ಆಧುನಿಕತೆಯ ಹಾದಿಗೆ ತಂದ ವಿಶಿಷ್ಟ ಗುಣ ಏನು? ಮಾನವ ಶಾಸ್ತ್ರಜ್ಞರ ಪ್ರಕಾರ ಮನುಷ್ಯ ಜೀವಿಯ ಉನ್ನತ ಸೃಜನಶೀಲತಾ ಸಾಮರ್ಥ್ಯವೇ ಆ ಗುಣ. ಹಾಗೆಂದರೆ ವೈಚಾರಿಕತೆ, ವಸ್ತುನಿಷ್ಠ ಆಲೋಚನೆ, ಕಲ್ಪನಾ ಶಕ್ತಿ, ಕೌಶಲ್ಯ ಮತ್ತು ಕಲಾಸಕ್ತಿಗಳ ಅಸ್ತಿತ್ವವೇ ಮನುಷ್ಯರ ಉತ್ಕರ್ಷದ ಮೂಲ ಕಾರಣ. ಹಾಗೆಂದೊಡನೆ ಒಂದು ಪ್ರಶ್ನೆ ತುಂಬ ಸಹಜ: 'ಮನುಷ್ಯ ಕಲೆಗಳ ಎಂದರೆ ಶಿಲ್ಪಕಲೆ ಚಿತ್ರಕಲೆ ಸಂಗೀತ ಕಲೆ ಇತ್ಯಾದಿ ಲಲಿತ ಕಲೆಗಳು ಮನುಷ್ಯ ಪ್ರಪಂಚದಲ್ಲಿ ಎಷ್ಟು ಕಾಲ ಹಿಂದಿನಿಂದ ಅಸ್ತಿತ್ವದಲ್ಲಿವೆ?' ಇದನ್ನು ಕುರಿತಂತೆ ಈ ವರೆಗೆ ಲಭಿಸಿರುವ ಕೆಲ ಸ್ಪಷ್ಟ ದಾಖಲೆಗಳ ಸೋಜಿಗದ ಸಂಕ್ಷಿಪ್ತ ವಿವರಗಳು:

ಫ್ರಾನ್ಸ್ ದೇಶದಲ್ಲಿ, ಕಾರ್ಗತ್ತಲ ಗುಹೆಯೊಂದರಲ್ಲಿ ಅದ್ಭುತ 'ಮೃತ್ತಿಕಾ ಶಿಲ್ಪ'ವೊಂದು ಪತ್ತೆಯಾಗಿದೆ. ಜೇಡಿಮಣ್ಣಿನಿಂದ ರಚಿಸಲಾಗಿರುವ ಕಾಡುಕೋಣಗಳ ಆ ದಿವ್ಯ ಶಿಲ್ಪದ (ಚಿತ್ರ–1) ಕಾಲ ಹದಿನಾಲ್ಕು ಸಾವಿರ ವರ್ಷ ಹಿಂದಿನದು! ಫ್ರಾನ್ಸ್ ದೇಶದ್ದೇ ಮತ್ತೊಂದು ಪುರಾತನ ಮಾನವ ನೆಲೆಯಲ್ಲಿ ಲಭಿಸಿರುವ ಎಲುಬಿನ ಕೆತ್ತನೆ ಕಲಾಕೃತಿ ಇಪ್ಪತ್ತೈದು ಸಾವಿರ ವರ್ಷ ಹಳೆಯದು!

ಪ್ರಾಚೀನ ಮಾನವರ ಸಂಗೀತಾಸಕ್ತಿಯ ಪ್ರಥಮ ಕುರುಹಾಗಿ ಸಂಗೀತ ವಾದ್ಯವೊಂದು ಸಿಕ್ಕಿದೆ. ಉದ್ದವಾದ ಕೊಳವೆಯಂತಹ ಹಕ್ಕಿ ಮೂಳೆಯೊಂದರಲ್ಲಿ ರಂಧ್ರಗಳನ್ನು ಕೊರೆದು ತಯಾರಿಸಿರುವ ಕೊಳಲಿನಂತಹ ಆ ಸುಷಿರ ವಾದ್ಯದ ಪ್ರಾಚೀನತೆ ಇಪ್ಪತ್ತೈದು ಸಾವಿರ ವರ್ಷ.

ಪ್ರಾಚೀನ ಮನುಷ್ಯರ ಸರ್ವವಿಧ ಕಲಾಕೃತಿಗಳಲ್ಲೂ 'ಚಿತ್ರ ಕಲಾಕೃತಿ'ಗಳದೇ




ಗರಿಷ್ಠ ಸಂಖ್ಯೆ, ಗರಿಷ್ಠ ವೈವಿಧ್ಯ. ವಿಶೇಷವಾಗಿ ಯೂರೋಪ್ ಖಂಡದ ಫ್ರಾನ್ಸ್, ಇಟಲಿ ಮತ್ತು ಸ್ಪೇನ್ ದೇಶಗಳಲ್ಲಿ ಗುಹೆಗಳ ಅಂತರಾಳದ ಗೋಡೆಗಳ ಮೇಲೆ–ಚಾವಣಿಯಲ್ಲಿ ರಚಿಸಲಾಗಿರುವ ಹೇರಳ ವಿಧಗಳ ವರ್ಣಚಿತ್ರಗಳದು ಅದ್ಭುತ ಸೃಜನಶೀಲತೆ (ಚಿತ್ರ–2). ಇಂಥವೆಲ್ಲ ಕಲಾಗ್ಯಾಲರಿಗಳ ಗರಿಷ್ಠ ಪ್ರಾಚೀನತೆ ಮುವ್ವತ್ತು ಸಾವಿರ ವರ್ಷ. ಇತ್ತೀಚೆಗೆ ದಕ್ಷಿಣ ಆಫ್ರಿಕ ಮತ್ತು ಜಾಂಬಿಯಾ– ಈ ಎರಡೂ ಆಫ್ರಿಕನ್ ರಾಷ್ಟ್ರಗಳ ಕೆಲವು ಗುಹಾನೆಲೆಗಳಲ್ಲಿ ಮತ್ತೂ ಬಹಳ ಪ್ರಾಚೀನ ಮನುಷ್ಯ ಕಲಾಕೃತಿಗಳು ಲಭ್ಯವಾಗಿವೆ. ಶಿಲಾಚೂರುಗಳ ಮೇಲೆ ಕೊರೆಯಲಾಗಿರುವ ಬರೀ ಗೆರೆ ಗೆರೆ ಚಿತ್ತಾರಗಳ ಅಂಥ ಕಲಾಕೃತಿಗಳ ಕಾಲ ಈಗ್ಗೆ ಒಂದು ಲಕ್ಷ ವರ್ಷ ಹಿಂದಿನಷ್ಟು ಪ್ರಾಚೀನ! ಈವರೆಗೆ ತಿಳಿದಿರುವಂತೆ ಮಾನವ ಕಲೆಯ ಗರಿಷ್ಠ ಪ್ರಾಚೀನತೆ ಇದೇ.

■ ಎನ್. ವಾಸುದೇವ್